# ಆನ್‌ಲೈನ್ ತರಗತಿ ಅನಿವಾರ್ಯ

**ನೆಲಮಂಗಲ:** ಕೊರೊನಾ ಆತಂಕದಿಂದ ಕಾಲೇಜುಗಳ ಆರಂಭ ವಿಳಂಬವಾಗುತ್ತಿರುವುದರಿಂದ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ತಯಾರಾಗಲು ಹಾಗೂ ಕಲಿಕೆಯ ನಿರಂತರತೆಗೆ ಆನ್‌ಲೈನ್ ತರಗತಿ ಅನಿವಾರ್ಯ ಎಂದು ಸಿದ್ಧಗಂಗಾ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ವೀರಭದ್ರಸ್ವಾಮಿ ಅಭಿಪ್ರಾಯಪಟ್ಟರು.

ತಾಲೂಕಿನ ಗಣೇಶನಗುಡಿಯ ಸಿದ್ಧಗಂಗಾ ಪ್ರಥಮದರ್ಜೆಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ತರಗತಿ ಆರಂಭಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಕಾಲೇಜಿಗೆ ಬರಲು ವಾಹನಗಳ ಸಮಸ್ಯೆ, ಸಾಮಾಜಿಕ ಅಂತರ, ಸುರಕ್ಷತೆ ಸೇರಿದಂತೆ ಅನೇಕ ಸಮಸ್ಯೆಗಳು ಎದುರಾಗುವುದರಿಂದ ಕಾಲೇಜುಗಳ ಆರಂಭ ವಿಳಂಭವಾಗುತಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ಸಮಸ್ಯೆಯಾಗುವ ಜತೆ ಪರೀಕ್ಷೆ ಎದುರಿಸಲು ಆತಂಕ ಪಡು ತ್ತಾರೆ. ಆನ್‌ಲೈನ್ ತರಗತಿ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳಷ್ಟು ಅನುಕೂಲವಾಗಲಿದೆ ಎಂದರು.

## ದಿನಕ್ಕೆ 2 ಗಂಟೆ ಕ್ಲಾಸ್: ಡಾ.ವೀರಭದ್ರಸ್ವಾಮಿ

ಆಂಗ್ಲ ಪ್ರಾಧ್ಯಾಪಕ ಜಿ.ಗಂಗರಾಜು ಮಾತನಾಡಿ, ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಪೂರ್ವತ ಯಾರಿ ಮಾಡಿಕೊಂಡು ಆನ್‌ಲೈನ್ ತರಗತಿ ಆರಂಭಿಸಲಾಗಿದ್ದು ಈಗಾಗಲೇ ವಾಟ್ಸ್ ಆ್ಯಪ್ ಮೂಲಕ ಪರೀಕ್ಷೆಗೆ ತಯಾರಿ ನಡೆಸಲಾಗಿದೆ ಈ ಸದುಪಯೋಗವನ್ನು ಪ್ರತಿಯೊಬ್ಬ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದರು.

**100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗಿ:** ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಯ ವೇಳಾಪಟ್ಟಿ ನೀಡಲಾಗಿದ್ದು ಜೂಮ್ ಆ್ಯಪ್ ಮೂಲಕ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಒಂದೇ ಭಾರಿ ತರಬೇತಿಯಲ್ಲಿ ಭಾಗವಹಿಸ ಬಹುದು. ಕಾಲೇಜು ಪ್ರಾಧ್ಯಾಪಕರಾದ ಬಿ.ಎಂ. ಮಾಲಿನಿ, ಆಂಗ್ಲ ಭಾಷಾ ಮುಖ್ಯಸ್ಥೆ ಡಾ.ಎಸ್. ಜಗದಾ, ಎನ್‌ಸಿಸಿ ಮುಖ್ಯಸ್ಥ ಡಾ.ಅಮರೇಂದ್ರ, ಎಲ್ ಚನ್ನಪ್ಪ, ಶ್ರೀಧರ್ ಮೂರ್ತಿ, ಮತ್ತಿತರರಿದ್ದರು.



ನೆಲಮಂಗಲ ತಾಲೂಕಿನ ಗಣೇಶನಗುಡಿಯಲ್ಲಿನ ಸಿದ್ದಗಂಗಾ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ತರಗತಿಗೆ ಪ್ರಾಂಶುಪಾಲ ಡಾ.ವೀರಭದ್ರಸ್ವಾಮಿ ಚಾಲನೆ ನೀಡಿದರು.

6:54 88%






# ಕಾಲೇಜು ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಶಿಕ್ಷಣ

ನೆಲಮಂಗಲ: ಕೊರೊನಾ ಎಫೆಕ್ಟ್‌ನಿಂದಾಗಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅನಾನುಕೂಲವುಂಟಾಗಿದೆ. ಈ ಹಿನ್ನೆಲೆಯಲ್ಲಿ ಪಟ್ಟಣದ ಶ್ರೀಸಿದ್ದಗಂಗಾ ಪದವಿ ಕಾಲೇಜಿನಲ್ಲಿ ಆನ್‌ಲೈನ್ ಮೂಲಕ ಶಿಕ್ಷಣ ನೀಡುವ ಕ್ರಿಯೆಗೆ ಪ್ರಾಧ್ಯಾಪಕ ವೃಂದವೇ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಹಾಘೂ ಪರೀಕ್ಷೆಗೆ ಅವರನ್ನು ಸಜ್ಜುಗೊಳಿಸುವ ಹಿನ್ನೆಲೆಯಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ಇಂದು ಚಾಲನೆ ನೀಡಲಾಗಿದೆ. ಸಿದ್ದಗಂಗಾ ಕಾಲೇಜಿನ ಸಹ ಪ್ರಾಧ್ಯಾಪಕ ಹಾಗೂ ಎನ್‌ಎಸ್‌ಎಸ್ ಶಿಭಿರಾಕಾರಿ ಡಾ.ಜಿ.ಗಂಗರಾಜು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಚನ್ನಪ್ಪ, ಇತಿಹಾಸ ವಿಭಾಗದ ಪ್ರಾಧ್ಯಾಪಕಿ ಬಿ.ಎಂ. ಮಾಲಿನಿ, ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕಿ ಎಸ್.ಜಗದ, ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಶ್ರೀಧರ್, ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ಪ್ರಕಾಶ್ ಸೇರಿದಂತೆ ಹಲವಾರು ವಿದ್ಯಾರ್ಥಿಗಳು ಇತರರಿದ್ದರು.

COVID - 19
Cured / Discharged (India)
26400
COVID - 19
Cured / Discharged (Karnataka)
451

ಾಗುವಷ್ಟು
ತರಣೆ

Instagram
Google Play
INSTALL

ಅಸಂಘಟಿತ ಕೂಲಿ ಕಾರ್ಮಿಕರು ಒಂದೊತ್ತಿನ

ಹುಟ್ಟು ಸಾವು ಸಹಜ. ಆದರ ಮಧ್ಯೆ ಜನ ಸೇವೆ ಮಾಡುವ ಅವಕಾಶವನ್ನು ತಪ್ಪಿಸಿಕೊಳ್ಳಬಾರದು ಎಂದರು. ಜಿಗಣಿ ಠಾಣೆ ವೃತ್ತ ನಿರೀಕ್ಷಕ ಕೆ.ವಿಶ್ವನಾಥ್ ಮಾತನಾಡಿ, ಕರೊನಾ ತುರ್ತು ಸಂದರ್ಭದಲ್ಲಿ ಸೇವೆ ಸಲ್ಲಿಸಿದರನ್ನು ಗುರುತಿಸುವ ಕೆಲಸವಾಗಬೇಕು ಎಂದರು. ಪ್ರತಿದಿನ 80 ಸಾವಿರಕ್ಕೂ ಹೆಚ್ಚು ಜನರಿಗೆ ಊಟ ಹಾಗೂ ಆಹಾರಧಾನ್ಯದ ಕಿಟ್ ವಿತರಣೆ ಮಾಡಲು ಜಿಗಣಿ ಸುತ್ತಮುತ್ತಲಿನ ಕಂಪನಿಗಳು ಮುಂದೆ

ಎಲ್ಲರಿಗೂ ಧನ್ಯವಾದ ಅರ್ಪಿಸಬೇಕಿದೆ ಎಂದರು. ಸಾಹಿತಿ ನಾಗಲೇಖ, ತಾಪಂ ವ್ಯವಸ್ಥಾಪಕ ನಾಗರಾಜು, ರಾಜಲಾಂಚನ ಸಂಸ್ಥೆ ಕೇಂದ್ರ ಘಟಕ ಅಧ್ಯಕ್ಷ ನರಸಿಂಹಮೂರ್ತಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ ನಂದಿ, ಎಇಇ ಪರ್ಷ ನಾಯಕ್, ಆನೇಕಲ್ ತಾಲೂಕು ಅಧ್ಯಕ್ಷ ಗಣೇಶ್, ರವಿ, ಎಚ್.ಎ.ಶೇಖರ್, ಎಲ್.ಹೇಮಂತ್ ಕುಮಾರ್, ಪಿ.ಮಂಜುನಾಥ್, ಜಿ.ಸೋಮು, ನಾರಾಯಣ ಸ್ವಾಮಿ ಇದ್ದರು.



ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ದೇವನಹಳ್ಳಿ ತಾಲೂಕಿನ ಕಸಬಾ ಹೋಬಳಿಯ ನಾರಾಯಣಸ್ವಾಮಿ ಎಂಬುವರ ಹತ್ತು ವರ್ಷದ ಬಾಲಕ ಸೋಷನ್ ಎಂಬಾತನ ಚಿಕಿತ್ಸೆಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 16,900 ರೂಪಾಯಿಗಳ ಆರ್ಥಿಕ ನೆರವಿನ ಚೆಕ್‌ಅನ್ನು ಶಾಸಕ ನಿಸರ್ಗ ನಾರಾಯಣಸ್ವಾಮಿ ಬಾಲಕನ ಪಾಲಕರಿಗೆ ಹಸ್ತಾಂತರಿಸಿದರು. ಪುರಸಭಾ ಸದಸ್ಯ ಜಿ.ಎ.ರವೀಂದ್ರ, ಸೋಮಣ್ಣ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮುನಿರಾಜು ಮತ್ತಿತರರಿದ್ದರು.

**ಪ್ರಾಂಶುಪಾಲ ವೀರಭದ್ರಸ್ವಾಮಿ ಅಭಿಮತ** | **ಶ್ರೀ ಸಿದ್ಧಗಂಗಾ ಕಾಲೇಜಿನಲ್ಲಿ ವಿಶೇಷ ತರಗತಿ**

# ಆನ್‌ಲೈನ್ ತರಗತಿಗಳಿಂದ ವಿದ್ಯಾರ್ಥಿಗಳ ಕಲಿಕೆ ಸರಳ

■ ಜಯವಾಣಿ ಸುದ್ದಿಜಾಲ ನೆಲಮಂಗಲ

ವಿದ್ಯಾರ್ಥಿಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯಗೊಳಿಸಲು ಆನ್‌ಲೈನ್ ತರಗತಿಗಳು ಸಹಕಾರಿ ಎಂದು ಪ್ರಾಂಶುಪಾಲ ಎಚ್.ವಿ. ವೀರಭದ್ರಸ್ವಾಮಿ ಅಭಿಪ್ರಾಯಪಟ್ಟರು.

ತಾಲೂಕಿನ ಸೊಂಡೇಕೊಪ್ಪ ರಸ್ತೆಯಲ್ಲಿ ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಆನ್‌ಲೈನ್ ತರಗತಿಗಳಿಗೆ ಚಾಲನೆ ನೀಡಿ ಮಾತನಾಡಿದರು.

ಕರೊನಾ ವೈರಸ್ ಸೋಂಕು ಜಗತ್ತಿನ ಬಹುತೇಕ ರಾಷ್ಟಗಳನ್ನು ತಲ್ಲಣಗೊಳಿಸಿರುವುದು ಒಂದೆಡೆಯಾದರೆ ಜಗತ್ತಿನ ಆರ್ಥಿಕತೆ ಹಾಗೂ ಶಿಕ್ಷಣ ಕ್ಷೇತ್ರದ ಮೇಲೂ ಕೆಟ್ಟ ಪರಿಣಾಮವನ್ನುಂಟು ಮಾಡಿದೆ. ಇಂತಹ ಸಂದಿಗ್ಧ ಪರಿಸ್ಥಿತಿ ನಡುವೆ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ವಿದ್ಯಾರ್ಥಿಗಳಿಗೆ ಪಾಠ ಬೋಧನೆ ಮಾಡುವುದು, ಪರೀಕ್ಷೆ ನಡೆಸುವ ಕುರಿತಾದ ಅನೇಕ ಪ್ರಶ್ನೆಗಳು ಶಿಕ್ಷಣ ತಜ್ಞರು, ಸರ್ಕಾರ ಮತ್ತು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳನ್ನು ಕಾಡುತ್ತಿವೆ ಎಂದರು.

ರಾಜ್ಯ ಮತ್ತು ದೇಶದ ಕೋಟ್ಯಂತರ ಸಂಖ್ಯೆಯ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ನಮ್ಮ ಕಾಲೇಜಿನ ವಿದ್ಯಾರ್ಥಿಗಳನ್ನು ಕಲಿಕೆ ಪ್ರಕ್ರಿಯೆಗೆ ಒಳಪಡಿಸುವುದು, ಪರೀಕ್ಷೆಗೆ ಸಜ್ಜುಗೊಳಿಸುವುದು ಸೇರಿ ಶಿಕ್ಷಣದಿಂದ ವಂಚಿತರಾಗದಂತೆ ಮುನ್ನೆಚ್ಚರಿಕೆವಹಿಸುವ ಉದ್ದೇಶದಿಂದ ಆನ್‌ಲೈನ್ ತರಗತಿ ಆರಂಭಿಸಲಾಗಿದೆ. ಈಗಾಗಲೇ ಎಲ್ಲ ವಿದ್ಯಾರ್ಥಿಗಳ ಸಂಪರ್ಕ ಸಾಧಿಸಿರುವ ಆಡಳಿತ ಮಂಡಳಿ ಮತ್ತು ಅಧ್ಯಾಪಕರ ತಂಡ ವ್ಯಾಟ್ಸ್‌ಆ್ಯಪ್ ಗ್ರೂಪ್ ಸಿದ್ಧಪಡಿಸಿದ್ದು, ಅಗತ್ಯ ನೋಟ್ಸ್ ವಿನಿಮಯ ಮಾಡಲಾಗಿದೆ. ಪಟ್ಟಣ ಹಾಗೂ ಗ್ರಾಮೀಣಭಾಗದ ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳ ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು ಎಂದರು

ಕಾರ್ಯಕ್ರಮ ಆಯೋಜಕ ಜಿ.ಗಂಗರಾಜು, ಉಪನ್ಯಾಸಕ ಕೆ.ಅಮರೇಂದ್ರ, ಎಚ್.ಶ್ರೀಧರ್‌ಮೂರ್ತಿ, ಎಸ್.ಜಗದಾಂಬಾ ಬಿ.ಎಂ.ಮಾಲಿನಿ, ಎಲ್.ಚನ್ನಪ್ಪ, ಎಂ.ಉದಯ್‌ಕುಮಾರ್, ಎಚ್ ಎಸ್.ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.



ನೆಲಮಂಗಲ ತಾಲೂಕಿನ ಸೊಂಡೇಕೊಪ್ಪ ರಸ್ತೆಯ ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಆನ್‌ಲೈನ್ ಕ್ಲಾಸ್‌ಗೆ ಪ್ರಾಂಶುಪಾಲ ಎಚ್.ವಿ.ವೀರಭದ್ರಸ್ವಾಮಿ ಚಾಲನೆ ನೀಡಿದರು. ಕಾರ್ಯಕ್ರಮ ಆಯೋಜಕ ಜಿ.ಗಂಗರಾಜು ಮತ್ತಿತರರು ಇದ್ದರು.

ಶೈಕ್ಷಣಿಕ ಸಮಸ್ಯೆ ಪರಿಹರಿಸಲು 'ಕುಂದು ಕೊರತೆ ಕೋಶ' ತೆರೆಯುವಂತೆ ಎಲ್ಲ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಗೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ) ಸೂಚನೆ ನೀಡಿದೆ.